# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 91 (1006) |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು 2023-24ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಿಸಿದ ತಾಲ್ಲೂಕುಗಳ ಸಂಖ್ಯೆ ಎಷ್ಟು; ಒಟ್ಟು ಬೆಳೆ ಹಾನಿಯಾದ ಪ್ರದೇಶವೆಷ್ಟು; ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ಹಾನಿಯಿಂದ ಅನ್ನದಾತರಿಗೆ ಆದ ನಷ್ಟವೇನು; (ಸಂಪೂರ್ಣ ಮಾಹಿತಿ ನೀಡುವುದು) | 2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಳೆಯ ವೈಫಲ್ಯದ ಕಾರಣ, ಸರ್ಕಾರದ ಆದೇಶ ಸಂಖ್ಯೆ: ಕಂಇ 449 ಟಿಎನ್‌ಆರ್ 2023, ದಿನಾಂಕ:13.09.2023, 12.10.2023 ಮತ್ತು 04.11.2023 ರ ಆದೇಶಗಳಲ್ಲಿ ಒಟ್ಟು 223 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿರುತ್ತದೆ.<br><br>ಮುಂಗಾರು ಹಂಗಾಮಿನಲ್ಲಿ ಒಟ್ಟಾರೆಯಾಗಿ 48.178 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.<br><br>ಹಿಂಗಾರು ಹಂಗಾಮಿನಲ್ಲಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಭಾರಿ ಮಳೆಯಿಂದ ಒಟ್ಟು 3327.3725 ಹೆಕ್ಟೇರ್ ಬೆಳೆ ನಷ್ಟವಾಗಿದೆ. |
| ಆ) | ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ನಷ್ಟ ಅನುಭವಿಸಿದ ಒಟ್ಟು ರೈತರ ಸಂಖ್ಯೆ ಎಷ್ಟು; ಬೆಳೆ ನಷ್ಟ ಪರಿಹಾರವನ್ನು ಪಡೆದ ರೈತರ ಸಂಖ್ಯೆ ಎಷ್ಟು; ಎಷ್ಟು ಮೊತ್ತವನ್ನು ಪಾವತಿಸಲಾಗಿದೆ; ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ನಷ್ಟ ಅನುಭವಿಸಿದ ಎಲ್ಲಾ ರೈತರಿಗೆ ಪರಿಹಾರವನ್ನು ಪಾವತಿಸಲಾಗಿದೆಯೇ; ಪರಿಹಾರದಿಂದ ಹೊರಗುಳಿದ ರೈತರ ಸಂಖ್ಯೆ ಮತ್ತು ಕಾರಣಗಳನ್ನು ನೀಡುವುದು; ಬೆಳೆ ನಷ್ಟ ಪರಿಹಾರವನ್ನು ಯಾವ ಮಾನದಂಡಗಳ ಅನುಸಾರ ಪಾವತಿ ಮಾಡಲಾಗಿದೆ; ಪಾವತಿಸಲು ನಿಗದಿಪಡಿಸಿದ ಅರ್ಹತೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ನೀಡಬಹುದಾದ ಪರಿಹಾರದ ಬಗ್ಗೆ ಭಾರತ ಸರ್ಕಾರದ ಗೃಹ ಮಂತ್ರಾಲಯವು, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಯ Revised Items and Norms of Assistance ಮಾರ್ಗಸೂಚಿಗಳನ್ನು ದಿನಾಂಕ: 11.07.2023ರಂದು ಹೊರಡಿಸಿರುತ್ತದೆ. ಹಾಗಾಗಿ, ನೈಸರ್ಗಿಕ ವಿಕೋಪಗಳಿಂದ ಉಂಟಾದ ಹಾನಿಗೆ ಭಾರತ ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ಮಾತ್ರ ಪರಿಹಾರವನ್ನು ರಾಜ್ಯ ವಿಪತ್ತು ಪರಿಹಾರ ನಿಧಿ/ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ನೀಡಲು ಅವಕಾಶವಿರುತ್ತದೆ. ಅದರಂತೆ, ಪ್ರತಿ ರೈತರಿಗೆ ಗರಿಷ್ಟ 02 ಹೆಕ್ಟೇರ್‌ಗೆ ಸೀಮಿತಗೊಳಿಸಿ, ಶೇ.33ಕ್ಕಿಂತ ಹೆಚ್ಚು ಬೆಳೆಹಾನಿಯಾದ ಮಳೆಯಾಶ್ರಿತ ಜಮೀನುಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.8,500, ನೀರಾವರಿ ಜಮೀನುಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.17,000 ಮತ್ತು ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.22,500/- ಗಳ ಪರಿಹಾರವನ್ನು ಪಾವತಿಸಲು ಅವಕಾಶವಿರುತ್ತದೆ. ಈ ಮಾನದಂಡಳ ಆಧಾರದ ಮೇರೆಗೆ ಮುಂಗಾರು ಹಂಗಾಮಿನಲ್ಲಿ ಒಟ್ಟು 38,78,525 ರೈತರುಗಳಿಗೆ ಒಟ್ಟು ರೂ.3535.30 ಕೋಟಿಗಳ ಬೆಳೆಹಾನಿ ಪರಿಹಾರವನ್ನು ನಿಯಮಾನುಸಾರ ಅರ್ಹರೈತರುಗಳಿಗೆ ನೇರವಾಗಿ ಅವರ ಆಧಾರ್ ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಗಳಿಗೆ ಡಿಬಿಟಿ ಮೂಲಕ ಪಾವತಿಸಲು ಕ್ರಮವಹಿಸಲಾಗಿದೆ.<br><br>ಹಿಂಗಾರು ಹಂಗಾಮಿನಲ್ಲಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ನವೆಂಬರ್-2023ರಲ್ಲಿ ಸುರಿದ ಭಾರಿ ಮಳೆಯಿಂದಾಗಿ ಉಂಟಾದ ಬೆಳೆಹಾನಿಗೆ ಒಟ್ಟು 4859 ರೈತರುಗಳಿಗೆ ರೂ.5.66 ಕೋಟಿಗಳನ್ನು ಬೆಳೆಹಾನಿ ಪರಿಹಾರವನ್ನು ನಿಯಮಾನುಸಾರ ಅರ್ಹ ರೈತರುಗಳಿಗೆ ನೇರವಾಗಿ ಅವರ ಆಧಾರ್ |

<table>
<tr><td></td><td></td><td>ಜೋಡಣೆಯಾಗಿರುವ ರೈತರ ಬ್ಯಾಂಕ್ ಖಾತೆಗಳಿಗೆ ಡಿಬಿಟಿ ಮೂಲಕ ಪಾವತಿಸಲು ಕ್ರಮವಹಿಸಲಾಗಿದೆ.<br><br>ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ನಷ್ಟ ಅನುಭವಿಸಿದ ಅರ್ಹ ರೈತರಿಗೆ ಬೆಳೆಹಾನಿ ಪರಿಹಾರವನ್ನು ನಿಯಮಾನುಸಾರ ಅರ್ಹತೆಗನುಗುಣವಾಗಿ ಪಾವತಿಸಲಾಗಿದೆ.</td></tr>
<tr><td>ಇ)</td><td>ಮಳೆ ಕೊರತೆಯಿಂದಾದ ಬೆಳೆ ನಷ್ಟವನ್ನು ಮಾತ್ರ ಪರಿಗಣಿಸಿರುವುದು ನಿಜವೇ; ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗದ, ಜಲಾಶಯದಲ್ಲಿ ನೀರಿನ ಕೊರತೆ, ಹಿಂಗಾರು ಹಂಗಾಮಿನ ಬೆಳೆ ನಷ್ಟ ಮಾಡಿಕೊಂಡ ರೈತರಿಗೆ ಪರಿಹಾರ ವಿತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಷ್ಟು ಜನ ರೈತರಿಗೆ ಪರಿಹಾರ ವಿತರಿಸಿರುವುದಿಲ್ಲ; ಕಾರಣವೇನು; ಯಾವ ಕಾರಣಕ್ಕೆ ಇವರನ್ನು ಕಡೆಗಣಿಸಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)</td><td>ಭಾರತ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ:11.07.2023 ರಂದು ಹೊರಡಿಸಿರುವ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಯ Revised Items and Norms of Assistance ಮಾರ್ಗಸೂಚಿಗಳನ್ವಯ ಮಳೆ ಕೊರತೆಯಿಂದಾಗಿ ಶೇ.33 ಕ್ಕಿಂತ ಹೆಚ್ಚು ಬೆಳೆಹಾನಿಯಾದ ಮಳೆಯಾಶ್ರಿತ ಬೆಳೆ ನಷ್ಟದ ಜೊತೆಗೆ, ನೀರಾವರಿಯಾಶ್ರಿತ ಜಮೀನುಗಳಲ್ಲಿ ಉಂಟಾದ ಬೆಳೆ ನಷ್ಟಕ್ಕೂ ನಿಯಮಾನುಸಾರ ಎಲ್ಲಾ ಅರ್ಹ ರೈತರಿಗೆ ಬೆಳೆಹಾನಿ ಪರಿಹಾರವನ್ನು ಪಾವತಿಸಲಾಗಿದೆ.<br><br>ಯಾವುದೇ ಬೆಳೆ ಬೆಳೆಯದೇ ಇರುವುದಕ್ಕೆ ಪರಿಹಾರ ನೀಡಲು ಮಾರ್ಗಸೂಚಿಗಳ ಪ್ರಕಾರ ಅವಕಾಶವಿರುವುದಿಲ್ಲ.</td></tr>
<tr><td>ಈ)</td><td>ಬೆಳೆ ನಷ್ಟ ಅನುಭವಿಸಿದ ರೈತರಿಗೆ ರಾಜ್ಯ ಸರ್ಕಾರದಿಂದ ನೀಡಿರುವ ಪರಿಹಾರವೇನು; ಬೆಳೆ ನಷ್ಟ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವು ಮಂಜೂರು ಮಾಡಿದ ಮೊತ್ತವೆಷ್ಟು; ರಾಜ್ಯ ಸರ್ಕಾರ ವಿನಿಯೋಗಿಸಿದ ಮೊತ್ತವೆಷ್ಟು; ಸದರಿ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ; ಸರ್ಕಾರವು ತನ್ನ ಸ್ವಂತ ನಿಧಿಯಿಂದ ಇಲ್ಲಿಯವರೆಗೆ ರೈತರಿಗೆ ಎಷ್ಟು ಪರಿಹಾರವನ್ನು ನೀಡಿದೆ? (ಸಂಪೂರ್ಣ ಮಾಹಿತಿ ನೀಡುವುದು)</td><td>ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (NDRF) 2023ನೇ ಸಾಲಿನ ಮುಂಗಾರು (Kharif) ಬರ ಪರಿಹಾರಕ್ಕಾಗಿ ರೂ.3498.82 ಕೋಟಿಗಳನ್ನು ಮಂಜೂರು ಮಾಡಿ, ಈ ಪೈಕಿ ರಾಜ್ಯ ವಿಪತ್ತು ಪರಿಹಾರ ನಿಧಿಯಡಿ ದಿನಾಂಕ:01/04/2023ಕ್ಕೆ ಬಾಕಿ ಇದ್ದ ರೂ.89.20ಕೋಟಿಗಳಲ್ಲಿ ಶೇ.50ರಷ್ಟು ಅಂದರೆ ರೂ.44.60ಕೋಟಿಗಳನ್ನು ಪ್ರಾರಂಭಿಕ ಮೊತ್ತ ಎಂದು ಪರಿಗಣಿಸಿ ಇನ್ನುಳಿದ ಮೊತ್ತ ರೂ.3454.22ಕೋಟಿಗಳನ್ನು ಭಾರತ ಸರ್ಕಾರದ ಆರ್ಥಿಕ ಮಂತ್ರಾಲಯವು ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ.<br><br>ರೂ. 3454.22 ಕೋಟಿಗಳಲ್ಲಿ, ರೂ.3266.42 ಕೋಟಿಗಳು ಬೆಳೆಹಾನಿ ಪರಿಹಾರಕ್ಕಾಗಿ ಹಾಗೂ ರೂ.232.42 ಕೋಟಿಗಳು ಜೀವನೋಪಾಯ ಪರಿಹಾರಕ್ಕಾಗಿ ((ಗ್ರ್ಯಾಟಿಟುಯಸ್ ರಿಲೀಫ್) ಭಾರತ ಸರ್ಕಾರವು ಬಿಡುಗಡೆ ಮಾಡಿರುತ್ತದೆ.<br><br>ಬರ ಪರಿಹಾರಕ್ಕಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ:<br>(ರೂ. ಕೋಟಿಗಳಲ್ಲಿ)
<table>
<tr><th>ಕ್ರ.ಸಂ</th><th>ಉದ್ದೇಶ<br>2023-24</th><th></th></tr>
<tr><td>1</td><td>ಬೆಳೆ ಪರಿಹಾರಕ್ಕಾಗಿ (Input Subsidy) – ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ.</td><td>636.44</td></tr>
<tr><td>2</td><td>ತುರ್ತು ಬರ ಪರಿಹಾರದ ಪಾವತಿಗಾಗಿ - ಎಲ್ಲಾ 31 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ</td><td>324.00</td></tr>
<tr><td>3</td><td>ಕಿರು ಮೇವಿನ ಕಿಟ್‌ಗಳ ಖರೀದಿಗೆ- ಪಶುಸಂಗೋಪನೆ ಇಲಾಖೆ.</td><td>40.00</td></tr>
<tr><td>4</td><td>ಬೆಂಗಳೂರಿನ ನಾಗರೀಕರಿಗೆ ಕುಡಿಯುವ ನೀರು ಸರಬರಾಜು ಮಾಡಲು – ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ.</td><td>15.00</td></tr>
<tr><td></td><td>2024-25</td><td></td></tr>
<tr><td>5</td><td>ಜೀವನೋಪಾಯ ಪರಿಹಾರಕ್ಕಾಗಿ</td><td>280.98</td></tr>
<tr><td colspan="2">ಒಟ್ಟು</td><td>1296.42</td></tr>
</table>
</td></tr>
</table>

| | | |
|---|---|---|
| | | ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡಗಳ ನಿರ್ಮಾಣಕ್ಕಾಗಿ -ಕೃಷಿ ಇಲಾಖೆಗೆ ರೂ. 100 ಕೋಟಿ ಹಾಗೂ 93 ಕೆರೆಗಳ ಅಭಿವೃದ್ಧಿಗಾಗಿ-ಸಣ್ಣ ನೀರಾವರಿ ಇಲಾಖೆಗೆ ರೂ. 100 ಕೋಟಿಗಳಂತೆ ಒಟ್ಟು ರೂ. 200 ಕೋಟಿಗಳನ್ನು ರಾಜ್ಯ ವಿಪತ್ತು ಉಪಶಮನ ನಿಧಿಯಿಂದ(STATE DISASTER MITIGATION FUND-SDMF)ಬಿಡುಗಡೆ ಮಾಡಲಾಗಿರುತ್ತದೆ.<br><br>ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು ಬೆಳೆ ಪರಿಹಾರ (Input Subsidy), ಸಣ್ಣ ಮತ್ತು ಅತಿ ಸಣ್ಣ, ಒಣ ಬೇಸಾಯ ಹೊಂದಿರುವ ರೈತ ಕುಟುಂಬಗಳ ಜೀವನೋಪಾಯ ಪರಿಹಾರ, ಕುಡಿಯುವ ನೀರು ಸರಬರಾಜು ಹಾಗೂ ಜಾನುವಾರುಗಳ ಮೇವಿಗಾಗಿ ಬಳಕೆ ಮಾಡಿಕೊಳ್ಳಲಾಗಿದೆ. |
| ಉ) | ಮುಂಗಾರು ಮತ್ತು ಹಿಂಗಾರು ಹಂಗಾಮು ಎರಡರಲ್ಲಿ ಆದ ಬೆಳೆ ನಷ್ಟಕ್ಕೆ ಪರಿಹಾರ ಪಾವತಿಸಲಾಗಿದೆಯೇ ಅಥವಾ ಒಂದೇ ಹಂಗಾಮಿನಲ್ಲಿ ಆದ ಬೆಳೆ ನಷ್ಟವನ್ನು ಪರಿಗಣಿಸಲಾಗಿದೆಯೇ; ಒಂದು ವೇಳೆ ಒಂದೇ ಹಂಗಾಮನ್ನು ಮಾತ್ರ ಪರಿಗಣಿಸಿದರೆ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ; ವರ್ಷಪೂರ್ತಿ ಬರಗಾಲವಿದ್ದ ಕಾರಣ ಎರಡೂ ಹಂಗಾಮಿನಲ್ಲಿ ಆದ ಬೆಳೆ ನಷ್ಟಕ್ಕೆ ಪರಿಹಾರವನ್ನು ಪಾವತಿಸಲು ಸರ್ಕಾರ ಕ್ರಮಕೈಗೊಳ್ಳಬಹುದಲ್ಲವೇ? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ 449 ಟಿಎನ್ಆರ್ 2023, ದಿನಾಂಕ:13.09.2023 ರಲ್ಲಿ ಒಟ್ಟು 161 ತಾಲ್ಲೂಕುಗಳನ್ನು ತೀವ್ರ ಬರಪೀಡಿತ ತಾಲ್ಲೂಕು, ಹಾಗೂ 34 ತಾಲ್ಲೂಕುಗಳನ್ನು ಸಾಧಾರಣ ಬರಪೀಡಿತ ತಾಲ್ಲೂಕುಗಳೆಂದು, ದಿನಾಂಕ: 12.10.2023 ಆದೇಶದಲ್ಲಿ ಒಟ್ಟು 17 ತಾಲ್ಲೂಕುಗಳನ್ನು ತೀವ್ರ ಬರಪೀಡಿತ ತಾಲ್ಲೂಕು, ಹಾಗೂ 04 ತಾಲ್ಲೂಕುಗಳನ್ನು ಸಾಧಾರಣ ಬರಪೀಡಿತ ತಾಲ್ಲೂಕುಗಳೆಂದು, ಮತ್ತು ದಿನಾಂಕ: 04.11.2023 ರ ಆದೇಶದಲ್ಲಿ ಒಟ್ಟು 07 ತಾಲ್ಲೂಕುಗಳನ್ನು ತೀವ್ರ ಬರಪೀಡಿತ ತಾಲ್ಲೂಕುಗಳೆಂದು ಒಟ್ಟಾರೆ 223 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಆದೇಶ ಹೊರಡಿಸಿದ ದಿನಾಂಕದಿಂದ 6 ತಿಂಗಳ ಅವಧಿಗೆ ಘೋಷಿಸಲಾಗಿರುತ್ತದೆ. ಗೃಹ ಮಂತ್ರಾಲಯವು, ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ / ರಾಜ್ಯ ವಿಪತ್ತು ಪರಿಹಾರ ನಿಧಿಯ Revised Items and Norms of Assistance ರನ್ವಯ ನೀಡಬಹುದಾದ ಪರಿಹಾರದ ಬಗ್ಗೆ ದಿನಾಂಕ: 11.07.2023 ರಂದು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಕಲ್ಪಿಸಿರುವ ಅವಕಾಶದಂತೆ, ಬರ ಪರಿಸ್ಥಿತಿಯನ್ನು 3 ತಿಂಗಳ ಹೆಚ್ಚುವರಿ ಕಾಲಾವಧಿಗೆ ವಿಸ್ತರಿಸಲಾಗಿದೆ.<br><br>ಬರ ಪರಿಸ್ಥಿತಿಯ ಅವಧಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಜಾನುವಾರುಗಳಿಗೆ ಮೇವು ಪೂರೈಕೆ, ಗೋಶಾಲೆಗಳ ನಿರ್ವಹಣೆ, ಬೆಳೆಹಾನಿ ಪರಿಹಾರಕ್ಕೆ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ. |

**ಕಡತ ಸಂಖ್ಯೆ:** ಕಂಇ 342 ಟಿಎನ್ಆರ್ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು